**ದಿ: 22-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಎನ್ ಡಬ್ಲು ಪಿ ವಕೀಲರಿಂದ:**

1. ಶರಣಪ್ಪ ತಂದೆ ಹನುಮಂತ್ರಾಯಗೌಡ ನಿಮಗೆ ಖಾಸ ಅಣ್ಣನ ಮಗನಾಗಬೇಕೆಂದರೆ ಸರಿ. ನಾನು ನನ್ನ ತಂದೆ ಮತ್ತು ಶರಣಪ್ಪ ರವರು ಜಂಟಿ ಒಟ್ಟು ಕುಟುಂಬದ ಸದಸ್ಯರಾಗಿರುತ್ತೇವೆ ಎಂದರೆ ಸರಿ. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮಗೆ ಬೇರೆ ಆಸ್ತಿಗಳು ಇರುತ್ತವೆ. ನಿ ಪಿ 1, 6, 12 ಮತ್ತು 17 ರಂತಿರುವ ಕೃಷಿ ಜಮೀನಿನ ಕ್ರಯಪತ್ರದ ನೋಂದಣಿಯನ್ನು ಒಂದೇ ದಿನಕ್ಕೆ ಒಬ್ಬರೆ ಮಾರಾಟಗಾರರಿಂದ ನೀವು 04 ಕ್ರಯಪತ್ರಗಳ ಮೂಲಕ ಕ್ರಯ ಮಾಡಿದ್ದಿರಿ ಎಂದರೆ ಸಾಕ್ಷಿಯು ಹೌದು ಅವು ಬೇರೆ ಬೇರೆ ಹಿಸ್ಸಾಗಳಾಗಿರುತ್ತವೆ ಎನ್ನುತ್ತಾರೆ. ಯಾವುದೇ ಆಸ್ತಿಯನ್ನು ಖರೀದಿ ಮಾಡಬೇಕಾದರೆ ಆಸ್ತಿಯ ಮಾಲೀಕತ್ವದ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ ಎಂದರೆ ಸರಿ. ದಾವಾ ಜಮೀನುಗಳನ್ನು ಖರೀದಿ ಮಾಡುವ ಪೂರ್ವ ದಲ್ಲಿ ಎಲ್ಲಾ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿದ್ದೇನೆ. ದಾವಾ ಜಮೀನುಗಳು ಶರಣಪ್ಪಗೌಡ ಇವರಿಗೆ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ದೊಡ್ಡಮ್ಮ ಶಂಕ್ರಮ್ಮಳಿಂದ ಶರಣಪ್ಪಗೌಡ ಇವರಿಗೆ ಮುಟೇಶನ್ ಆಗಿರುತ್ತದೆ ಎಂದು ಹೇಳುತ್ತಾರೆ. ಶಂಕ್ರಮ್ಮ ರವರಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನೋಂದಣಿ ಖರೀದಿ ಪತ್ರದ ಮೂಲಕ ಬಂದಿರುತ್ತದೆ. ಶಂಕ್ರಮ್ಮಳಿಗೆ ಆಗಿರುವ ಖರೀದಿ ಪತ್ರವನ್ನು ನಾನು ನೋಡಿದ್ದೇನೆ. ಆ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನೀವು ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ಶಂಕ್ರಮ್ಮ ರವರು ಯಾರ ಕಡೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಭೀಮವ್ವ ಮತ್ತು ಅವರ ಮಕ್ಕಳಿಂದ ಖರೀದಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನೀವು ಹಾಜರು ಮಾಡಿದ ಖರೀದಿ

ಪತ್ರದಲ್ಲಿ ಭೀಮವ್ವ ಮತ್ತು ಮಕ್ಕಳು ಮಾರಾಟ ಮಾಡಿದ ಬಗ್ಗೆ ಬರೆದಿದ್ದಾರೆಯೇ ಎಂದರೆ ಸಾಕ್ಷಿಯು ನಾನು ನೋಡಬೇಕು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಪೂರ್ವದಲ್ಲಿ ಭೀಮವ್ವಳ ಗಂಡ ಚಂದಪ್ಪ ಗುಬ್ಬಿ ಇವರಿಗೆ ಸಂಬಂಧಪಟ್ಟಿದ್ದವಾಗಿದ್ದವು. ಪೂರ್ವದಲ್ಲಿ ಚಂದಪ್ಪ ಗುಬ್ಬಿ ದಾವಾ ಆಸ್ತಿಯ ಮಾಲೀಕರು ಮತ್ತು ಕಬ್ಜಾದಾರರು ಇದ್ದರು. ಪ್ರತಿವಾದಿ ನಂಬರ್ 1 ಚಂದಪ್ಪ ಗುಬ್ಬಿ ಹೆಂಡತಿ ಮತ್ತು ಪ್ರತಿವಾದಿ 2 ರಿಂದ 4 ಅವರ ಮಕ್ಕಳು ಮತ್ತು ಅವರ ವಾರಸುದಾರರು ಆಗಿರುತ್ತಾರೆ ಎಂದರೆ ಸರಿ. ಚಂದಪ್ಪ ಗುಬ್ಬಿ ರವರು ತೀರಿಕೊಂಡ ಮೇಲೆ ಪ್ರತಿವಾದಿಯರು ಅವರ ವಾರಸುದಾರರು ಆಗಿರುತ್ತಾರೆ ಎಂದರೆ ಸಾಕ್ಷಿಯು ಚಮದಪ್ಪ ಗುಬ್ಬಿ ಇರುವಾಗಲೇ ನನ್ನ ದೊಡ್ಡಮ್ಮ ಖರೀದಿ ಮಾಡಿರುತ್ತಾರೆ ಅವರು ವಾರಸುದಾರರು ಆಗಿರುವುದಿಲ್ಲ ಎಂದು ಹೇಳುತ್ತಾರೆ.

3. ಮಲದಕಲ್ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಇದೆ ಎಂದರೆ ಸರಿ. ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುವ ಎಲ್ಲಾ ಮನೆಗಳಿಗೆ ಪಂಚಾಯಿತಿ ನಂಬರ್ ಕೊಡುತ್ತಾರೆ ಎಂದರೆ ಸರಿ. ದಾವಾ ಜಮೀನುಗಳು ಗ್ರಾಮದಲ್ಲಿ ಶಾಲೆಯ ಮುಂದುಗಡೆ ರೊಡಿಗೆ ಹತ್ತಿಕೊಂಡಿವೆ ಎಂದರೆ ಸರಿ. ದಾವಾ ಜಮೀನಿನಲ್ಲಿ ಬಬಲಾದ ಎಂಬುವವರ ಹೋಟೆಲ್ ಇದೆ ಎಂದರೆ ಸರಿ. ಆ ಹೋಟೆಲ್ ಆದ ನಂತರ ತಿಪ್ಪೆಗುಂಡಿಗಳು ಇವೆ ಎಂದರೆ ಸರಿ. ನಂತರ ಪ್ರತಿವಾದಿಯರ ವಂಶಸ್ಥರ ಸಮಾಧಿಗಳು ಇವೆ ಎಂದರೆ ಸರಿ. ಆ ಸಮಾಧಿಗಳ ನಂತರ ಪ್ರತಿವಾದಿಯರ ಗುಡಿಸಲುಗಳು ಇವೆ ಎಂದರೆ ಸಾಕ್ಷಿಯು ಹೌದು ಇವೆ ಆದರೆ ಅವು ಅನಧಿಕೃತವಾಗಿ ಕಟ್ಟಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಪ್ರತಿವಾದಿಯರ ಮತ್ತು ಅವರ ಅಣ್ಣ ತಮ್ಮಂದಿರ ಮತ್ತು ಸಂಬಂಧಿಕರ 10-15 ಗುಡಿಸಲುಗಳು ಇವೆ ಎಂದರೆ ಸಾಕ್ಷಿಯು ಅಷ್ಟು ಗುಡಿಸಲುಗಳು ಇಲ್ಲ 1-2 ಗುಡಿಸಲುಗಳು ಇವೆ ಎನ್ನುತ್ತಾರೆ. ಪ್ರತಿವಾದಿಗಳು ಕಂಪೌಂಡ್

ಕಟ್ಟಿಕೊಂಡು ನೇಗಿಲು ಮತ್ತು ದನಗಳನ್ನು ಕಟ್ಟಿಕೊಂಡಿರುತ್ತಾರೆಂದರೆ ಸರಿ. ದಾವಾ ಜಮೀನಿನ ಉಳಿಕೆ ಜಾಗದಲ್ಲಿ ದೊಡ್ಡ ದೊಡ್ಡ ಜಾಲಿಗಿಡಗಳು ಬೆಳದಿವೆ ಎಂದರೆ ಸರಿ. ಆ ಜಾಲಿ ಗಿಡಗಳನ್ನು ಕಡಿದು ಅವುಗಳನ್ನು ಸುಟ್ಟು ಇದ್ದಿಲು ಮಾಡಿ ಬಾಂಬೆ ಮತ್ತು ಹೈದ್ರಾಬಾದ್ ಗೆ ಕಳುಹಿಸುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಎನ್ನುತ್ತಾರೆ.

4. ದಾವಾ ಜಮೀನು ಗಳು 04 ಹಿಸ್ಸಾಗಳಿವೆ, 3ನೇ ದಾವಾ ಜಮೀನಿನ 1/4/3, ವಿಸ್ತೀರ್ಣ 15-16 ಗುಂಟೆ ಇರಬಹುದು, ಪೂರ್ವಕ್ಕೆ ಬುಡ್ಡಪ್ಪ, ಪಶ್ಚಿಮಕ್ಕೆ- ಶರಣಪ್ಪಗೌಡ , ಉತ್ತರಕ್ಕೆ ಶರಣಪ್ಪಗೌಡ ಮತ್ತು ದಕ್ಷಿಣಕ್ಕೆ ಸ್ಕೂಲ್ ಇರುತ್ತದೆ. 04 ದಾವಾ ಜಮೀನು ಮತ್ತು ಶಾಲೆಯ ಮದ್ಯದಲ್ಲಿ ಮಲದಕಲ್ ಗ್ರಾಮಕ್ಕೆ ಹೋಗುವ ಮುಖ್ಯ ರಸ್ತೆ ಇದೆ ಎಂದರೆ ಸರಿ. ಶಂಕ್ರಮ್ಮ ಆಗಲಿ ನಿಮಗೆ ಮಾರಾಟ ಮಾಡಿದ ಶರಣಪ್ಪಗೌಡ ಆಗಲೀ ಮತ್ತು ನೀವಾಗಲೀ ದಾವಾ ಜಮೀನುಗಳಲ್ಲಿ ಎಂದು ಉಳುಮೆ ಮಾಡಿಲ್ಲ ಎಂದರೆ ಸಾಕ್ಷಿಯು ಮೊದಲು ಮಾಡಿದ್ದೇವೆ ಈಗ ಮಾಡುತ್ತಿಲ್ಲ ಎನ್ನುತ್ತಾರೆ. ದಾವಾ ಜಮೀನುಗಳಲ್ಲಿ ಶಂಕ್ರಮ್ಮ ಉಳುಮೆ ಮಾಡುತ್ತಿದ್ದರು ಅವರ ತರುವಾಯ ನಾನಾಗಲೀ ಮತ್ತು ಶರಣಪ್ಪಗೌಡನಾಗಲಿ ಉಳುಮೆಯನ್ನು ಮಾಡಿಲ್ಲ. ಶಂಕ್ರಮ್ಮ ರವರು ದಾವಾ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ನಿಮ್ಮ ತಂದೆ ಶರಣಗೌಡ ದೊಡ್ಡನೂರು ಊರಿನ ಗೌಡಿಕೆ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಊರಿಗೆ ಬರುವ ಗ್ರಾಮ ಲೆಕ್ಕಿಗರು, ಪಂಚಾಯಿತಿ ಸೆಕ್ರೆಟರಿಯವರು, ಪೋಲಿಸ್ ಅಧಿಕಾರಿಗಳು, ಮೊದಲು ನಮ್ಮ ಮನೆಗೆ ಬಂದು, ನಮ್ಮ ಮನೆಯಲ್ಲಿ ಊಟ ಮಾಡುವುದು ಏನಾದರೂ ವಿಚಾರ ಮಾಡುವುದು ಮಾಡುತ್ತಾರೆ ಎಂದರೆ ಸರಿ. ನಿಮ್ಮ ತಂದೆ ಗ್ರಾಮ ಲೆಕ್ಕಿಗರು, ಪಂಚಾಯಿತಿ ಸೆಕ್ರೆಟರಿಯವರು, ಪೋಲಿಸ್

ಅಧಿಕಾರಿಗಳಿಗೆ ಗೌರವ ಕೊಟ್ಟು ನಿಮ್ಮ ತಂದೆಯ ಮಾತು ಕೇಳುತ್ತಿದ್ದರು ಎಂದರೆ ಸಾಕ್ಷಿಯು ಅವರನ್ನು ಗೌರವಿಸುತ್ತಿದ್ದರು ಎನ್ನು ತ್ತಾರೆ.

5. ದಾವಾ ಜಮೀನುಗಳು ಚಂದಪ್ಪ ಗುಬ್ಬಿ ಅವರ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎನ್ನು ತ್ತಾರೆ. ನಿಮ್ಮ ತಂದೆಗೂ ಮತ್ತು ಕುಲಕರ್ಣಿಯವರಿಗೆ ಒಳ್ಳೆ ಸಂಬಂಧ ಇರುವುದರಿಂದ ಮುಟೇಶನ್ ಒಳಗಿಂದೊಳಗೆ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ಚಂದಪ್ಪ ಗುಬ್ಬಿ ಮತ್ತು ಅವರ ಕುಟುಂಬದವರ ಹೆಸರನ್ನು ತೆಗೆಸಿ ನಿಮ್ಮ ತಂದೆ ಮುಟೇಶನ್ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನೋಂದಣಾಧಿಕಾರಿಯವರ ಕಚೇರಿ ಇರಲಿಲ್ಲ 1972 ರಲ್ಲಿ ಕುಲಕರ್ಣಿಯವರು ರೌಂಡ ಮಾಡಿ ನನ್ನ ತಂದೆಯ ಹೆಸರಿಗೆ ಮುಟೇಶನ್ ಮಾಡಿಸಿಕೊಟ್ಟಿದ್ದಾರೆ ಎನ್ನು ತ್ತಾರೆ. ನಿಮ್ಮ ತಂದೆಗೆ ಮುಟೇಶನ್ ಆದ ಮೇಲೆ ಅವರು ನನ್ನ ದೊಡ್ಡಮ್ಮ ಶಂಕ್ರಮ್ಮ ಇವರ ಹೆಸರಿಗೆ ಮುಟೇಶನ್ ಮಾಡಿದ್ದಾರೆ ಎಂದರೆ ಸರಿ. ನಿಮ್ಮ ದೊಡ್ಡಮ್ಮ ಶಂಕ್ರಮ್ಮ ತರುವಾಯ ಅವರ ಮಗ ಶರಣಪ್ಪಗೌಡ ಹೆಸರಿಗೆ ಮುಟೇಶನ್ ಆಗಿರುತ್ತದೆ ಎಂದರೆ ಸರಿ. ನಿಮ್ಮ ತಂದೆಯಿಂದ ನಿಮ್ಮ ದೊಡ್ಡಮ್ಮ ಶಂಕ್ರಮ್ಮರವರಿಗೆ ಮತ್ತು ಅವರ ತರುವಾಯ ಅವರ ಮಗ ಶರಣಪ್ಪಗೌಡ ಇವರಿಗೆ ಮುಟೇಶನ್ ಗಳು ಕಾಗದ ಪತ್ರದಲ್ಲಿ ಆಗಿವೆ ಕಬ್ಜಾ ವರ್ಗಾವಣೆ ಆಗಿಲ್ಲ ಎಮದರೆ ಸಾಕ್ಷಿಯು ಮುಟೇಶನ್ ಆಗಿವೆ ನಾವು ಟ್ಯಾಕ್ಸ್ ಪಾವತಿಸಿರುತ್ತೇವೆ ಇನ್ನೇನು ಬೇಕು ಎನ್ನು ತ್ತಾರೆ.

6. ಪ್ರತಿವಾದಿಯರು ಅವಿದ್ಯಾವಂತರಾಗಿದ್ದು, ಅವರು ಪಹಣಿಗಳನ್ನು ನೋಡಿಲ್ಲ, ವಿಷಯ ಗೊತ್ತಾದ ಮೇಲೆ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಹೌದು ಎನ್ನು ತ್ತಾರೆ.

ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗದೇ ಇರುವುದರಿಂದ Dismiss for non prosecution ಆಗಿದೆ ಎಂದರೆ ಸಾಕ್ಷಿಯು ವಜಾ ಆಗಿರುವುದು ನನಗೆ ಗೊತ್ತಿದೆ ಎನ್ನುತ್ತಾರೆ.

ಮುಂದುವರಿದ ಪಾಟಿಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ